## ನಿಮ್ಮೊಡನೆ

# ಮಕ್ಕಳಿವರೇನಮ್ಮ..!

ಹತ್ತು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ ನಗರವಾಸದ ಆಕರ್ಷಣೆ ಹೆಚ್ಚಾಗಿದೆ. ಅದರಲ್ಲಿಯೂ ರಾಜಧಾನಿ ಬೆಂಗಳೂರು ಹೆಚ್ಚು ಜನರನ್ನು ಸೆಳೆದಿದೆ. 2011ರ ಜನಗಣತಿಯ ಪ್ರಾಥಮಿಕ ಹಂತದಲ್ಲಿ ಲಭ್ಯವಾಗಿರುವ ಮಾಹಿತಿಯಲ್ಲಿ ಬೆಂಗಳೂರಿನ ಜನಸಂಖ್ಯೆಯಲ್ಲಿ ಕಂಡು ಬಂದಿರುವ ಹೆಚ್ಚಳ ಶೇ 46.68ರಷ್ಟು! 2001ರಲ್ಲಿ 65 ಲಕ್ಷದಷ್ಟಿದ್ದ ಜನಸಂಖ್ಯೆ ಹತ್ತು ವರ್ಷಗಳಲಲ್ಲಿ 96 ಲಕ್ಷಕ್ಕೆ ಏರಿದೆ. ಅದು ಒಂದು ಕೋಟಿಯನ್ನು ಮುಟ್ಟುವ ಕಾಲ ದೂರವೇನೂ ಇಲ್ಲ. ಜನಗಣತಿಯ ಅಂಕಿ ಅಂಶಗಳು ಎಷ್ಟು ನಿಖರ ಎನ್ನುವ ಪ್ರಶ್ನೆ ಇದೆ. ಗಣತಿ ಮಾಡಿದ ಸಂದರ್ಭಕ್ಕೂ, ಎಲ್ಲ  ಮಾಹಿತಿಗಳನ್ನು ಕ್ರೋಡೀಕರಿಸುವ ಹಂತಕ್ಕೂ ಮಧ್ಯೆ ಇರುವ ಅವಧಿಯಲ್ಲಿ ಜನಸಂಖ್ಯೆಯಲ್ಲಿ ಹೆಚ್ಚಳ ಆಗುತ್ತಿರುತ್ತದೆ. ಕರಾರುವಾಕ್ಕಾದ ಮಾಹಿತಿ ಎಂಬುದು ಜನಸಂಖ್ಯೆಯ ವಿಷಯದಲ್ಲಿ ಸರಿಯಲ್ಲ. ಏನೇ ಇದ್ದರೂ, ಸಂಗ್ರಹಿಸಿದ ಮಾಹಿತಿಯನ್ನು ಆಧರಿಸಿಯೇ ಬೆಳವಣಿಗೆಯ ಗತಿಯನ್ನು ನಿರ್ಧರಿಸಬೇಕು. ಒಂದು ಪ್ರದೇಶಕ್ಕೆ ಸಂಬಂಧಿಸಿ ಕೈಗೊಳ್ಳಬಹುದಾದ ಯೋಜನೆಗಳಿಗೂ ಈ ಮಾಹಿತಿಗಳೇ ಆಧಾರವಾಗಿವೆ.

ಜನಸಂಖ್ಯಾ ನಿಯಂತ್ರಣದ ವಿಷಯದಲ್ಲಿ ರಾಜ್ಯದ ಜನತೆಯ ಸಂಯಮ ರಾಷ್ಟ್ರಕ್ಕೆ ಮಾದರಿಯಾಗಿದೆ. ಜನಸಂಖ್ಯೆ ಹೆಚ್ಚಳದ ರಾಷ್ಟ್ರೀಯ ಸರಾಸರಿ ಶೇಕಡಾ 21.54ರಷ್ಟಿದ್ದರೆ ರಾಜ್ಯದ ಸರಾಸರಿ ಶೇ 17.57. ರಾಜ್ಯದ ಅರ್ಧದಷ್ಟು ಜಿಲ್ಲೆಗಳಲ್ಲಿ ಈ ಪ್ರಮಾಣ ಒಂದಂಕಿಯನ್ನೂ ಮೀರಿಲ್ಲ. ಕುಟುಂಬ ಕಲ್ಯಾಣ ಯೋಜನೆಯ ಆಶಯಗಳನ್ನು ರಾಜ್ಯದ ಗ್ರಾಮೀಣ ಜನತೆ ಅರ್ಥ ಮಾಡಿಕೊಂಡಿದ್ದಲ್ಲದೆ, ಅದನ್ನು ಅನುಸರಿಸುವ ಮೂಲಕ ದೇಶಕ್ಕೆ ಮಾದರಿಯಾಗಿದ್ದಾರೆ ಎಂಬುದು ಸಮಾಧಾನಪಡುವ ಸಂಗತಿ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಜನನ ಸಂಖ್ಯೆ ಹೆಚ್ಚಳದ ಪ್ರಮಾಣ ಋಣಾತ್ಮಕ ಹಂತಕ್ಕೆ ಇಳಿದಿದೆ. ಈ ಸ್ಥಿತಿ ಸಮಾಜ ವಿಜ್ಞಾನಿಗಳ ಗಮನವನ್ನು ಸೆಳೆಯಬೇಕು. ಗರಿಷ್ಠ ಪ್ರಮಾಣದ ಈ ಸಾಧನೆಗೆ ಕಾರಣಗಳು ಸಾಮಾಜಿಕವೋ ನೈಸರ್ಗಿಕವೊ ಎಂಬುದನ್ನು ಪತ್ತೆ ಹಚ್ಚುವುದು ಕುತೂಹಲಕಾರಿ.

ಗಂಡು ಮತ್ತು ಹೆಣ್ಣು ನಡುವಣ ಅನುಪಾತದ ವಿವರಗಳೂ ಸ್ವಾರಸ್ಯಕರವಾಗಿವೆ. ಉಡುಪಿ, ಕೊಡಗು, ದಕ್ಷಿಣ ಕನ್ನಡ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಪುರುಷರ ಸಂಖ್ಯೆಗಿಂತ ಮಹಿಳೆಯರ ಸಂಖ್ಯೆ ಹೆಚ್ಚಿದೆ. ಉಳಿದೆಲ್ಲ ಜಿಲ್ಲೆಗಳಲ್ಲಿ ಮಹಿಳೆಯರ ಸಂಖ್ಯೆ ಪುರುಷರಿಗಿಂತ ಕಡಿಮೆ. ಅದು ಬೆಂಗಳೂರು ನಗರದಲ್ಲಿ ಇನ್ನೂ ಕಡಿಮೆ– ಒಂದು ಸಾವಿರ ಪುರುಷರಿಗೆ 908 ಮಹಿಳೆಯರು! ಈ ಸ್ಥಿತಿ ಸಾಮಾಜಿಕವಾಗಿ ಕಳವಳಕಾರಿ. ಲಿಂಗ ಸಮಾನತೆ, ಸಂಖ್ಯೆಯ ದೃಷ್ಟಿಯಲ್ಲಿಯೂ ಸಾಧನೆಯಾಗಬೇಕಾದ ಗುರಿ. ಹೆಣ್ಣುಮಕ್ಕಳ ಬಗೆಗಿನ ಸಾಮಾಜಿಕ ದೃಷ್ಟಿ ಬದಲಾಗಬೇಕೆಂಬ ಪರೋಕ್ಷ ಎಚ್ಚರಿಕೆಯನ್ನು ಈ ಸ್ಥಿತಿ ಸೂಚಿಸುತ್ತದೆ.

ಸಾಕ್ಷರತೆ ವಿಷಯದಲ್ಲಿ ರಾಜ್ಯದ ಸಾಧನೆ ಮೆಚ್ಚತಕ್ಕದ್ದು. ಹತ್ತು ವರ್ಷಗಳ ಹಿಂದೆ ಶೇ66.64ರಷ್ಟಿದ್ದ ಸಾಕ್ಷರತೆಯ ಪ್ರಮಾಣ ಈಗ ಶೇಕಡಾ 75.60ಕ್ಕೆ ಏರಿದೆ. ಉಡುಪಿ, ದಕ್ಷಿಣ ಕನ್ನಡ ಮತ್ತು ಬೆಂಗಳೂರು ನಗರದಲ್ಲಿ ಇದು ಶೇಕಡಾ 88ರವರೆಗೆ ಮುಟ್ಟಿದೆ. ರಾಜ್ಯದ ಸರಾಸರಿಗಿಂತಲೂ ಹೆಚ್ಚಿನ ಸಾಕ್ಷರತೆಯನ್ನು ಹನ್ನೆರಡು ಜಿಲ್ಲೆಗಳಲ್ಲಿ ಸಾಧಿಸಲಾಗಿದೆ. ಆದರೆ, ಯಾದಗಿರಿ, ರಾಯಚೂರು ಮತ್ತು ಮೈಸೂರು ಸನಿಹದ ಚಾಮರಾಜನಗರ ಜಿಲ್ಲೆಗಳಲ್ಲಿ ಇದು ಶೇಕಡಾ 60ಕ್ಕಿಂತಲೂ ಕಡಿಮೆ ಪ್ರಮಾಣಕ್ಕೆ ಇಳಿದಿದೆ. ಈ ಜಿಲ್ಲೆಗಳಲ್ಲಿ ಸರ್ವ ಶಿಕ್ಷಣ ಅಭಿಯಾನ ಪರಿಣಾಮಕಾರಿ ಅನುಷ್ಠಾನಗೊಳ್ಳುತ್ತಿಲ್ಲ ಎಂಬುದು ಅಂಗೈ ಹುಣ್ಣಿನಷ್ಟು ನಿಚ್ಚಳ.

ಹಿಂದುಳಿದ ಹೈದರಾಬಾದ್ ಕರ್ನಾಟಕದಲ್ಲಿ ಸಾಕ್ಷರತೆಯ ಪ್ರಮಾಣ ಹೆಚ್ಚಿಸಲು ಇನ್ನಷ್ಟು ವ್ಯಾಪಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾದ ಸ್ಥಿತಿಯನ್ನು ಈ ಅಂಕಿ ಅಂಶಗಳು ಸೂಚಿಸುತ್ತವೆ. ಕಳೆದ ಹತ್ತು ವರ್ಷಗಳಲ್ಲಿ ಓದು ಬರಹ ಬಲ್ಲವರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಿದೆ. ಇದು ಸಮಾಧಾನಪಡುವ ಸಂಗತಿ. ಆದರೆ, ವಿವೇಚನೆಯ ನಿರ್ಧಾರ ಕೈಗೊಳ್ಳುವುದಕ್ಕೆ ಈ ಬಗೆಯ ಸಾಕ್ಷರತೆಯಿಂದ ಪ್ರಯೋಜನವಾಗುತ್ತಿಲ್ಲ  ಎಂಬುದು ರಾಜಕೀಯ ನಿರ್ಧಾರದ ಸಂದರ್ಭದಲ್ಲಿ ವ್ಯಕ್ತವಾಗುತ್ತಿರುವ ಅಂಶ. ಪ್ರತಿ ಚುನಾವಣೆಯಲಿಲ್ಲಿಯೂ ಜನರ ವಿವೇಚನೆಯನ್ನು ನಿಷ್ಕ್ರಿಯಗೊಳಿಸಲು ನಡೆಯುತ್ತಿರುವ ಪ್ರಯತ್ನಗಳು ಯಶಸ್ವಿಯಾಗುತ್ತಿರುವುದನ್ನು ನೋಡಿದರೆ ಸಾಕ್ಷರತೆಯ ಪ್ರಮಾಣದ ಹೆಚ್ಚಳ ಸಾಮಾಜಿಕ ಸ್ವಾಸ್ಥ್ಯದ ದಿಕ್ಸೂಚಿಯೇನೂ ಅಲ್ಲವೆಂಬುದು ವೇದ್ಯವಾಗುತ್ತದೆ.

■ ಲಕ್ಷ್ಮಣ ಕೊಡಸೆ

ರಾಜ್ಯದ ಸರಾಸರಿಗಿಂತಲೂ ಹೆಚ್ಚಿನ ಸಾಕ್ಷರತೆಯನ್ನು ಹನ್ನೆರಡು ಜಿಲ್ಲೆಗಳಲ್ಲಿ ಸಾಧಿಸಲಾಗಿದೆ. ಆದರೆ, ಯಾದಗಿರಿ, ರಾಯಚೂರು ಮತ್ತು ಮೈಸೂರು ಸನಿಹದ ಚಾಮರಾಜನಗರ ಜಿಲ್ಲೆಗಳಲ್ಲಿ ಇದು ಶೇಕಡಾ 60ಕ್ಕಿಂತಲೂ ಕಡಿಮೆ ಪ್ರಮಾಣಕ್ಕೆ ಇಳಿದಿದೆ. ಈ ಜಿಲ್ಲೆಗಳಲ್ಲಿ ಸರ್ವ ಶಿಕ್ಷಣ ಅಭಿಯಾನ ಪರಿಣಾಮಕಾರಿ ಅನುಷ್ಠಾನಗೊಳ್ಳುತ್ತಿಲ್ಲ ಎಂಬುದು ಅಂಗೈ ಹುಣ್ಣಿನಷ್ಟು ನಿಚ್ಚಳ.

